ಕನ್ನಡಪ್ರಭ

Saturday 6th April 2019, Page No.12

# IAS: RVCE Student Rahul 17th Rank in UPSC exam 2018

# ಐಎಎಸ್: ರಾಹುಲ್ ಕರ್ನಾಟಕಕ್ಕೇ ಫಸ್ಟ್

## ರಾಜ್ಯದ 23 ಮಂದಿ ಪಾಸ್ | ಶಾಸಕ ಸಂಕನೂರು ಬಂಧು ರಾಹುಲ್ ದೇಶಕ್ಕೆ 17ನೇ ರ್‍ಯಾಂಕ್ | ಡಾ| ರಾಜ್ ಅಕಾಡೆಮಿಯ 17 ಮಂದಿ ಉತ್ತೀರ್ಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇಂದ್ರ ಲೋಕಸೇವಾ ಆಯೋಗ ನಡೆಸುವ ಯುಪಿಎಸ್‌ಸಿ 2019ನೇ ಸಾಲಿನ ಫಲಿತಾಂಶ ಪ್ರಕಟವಾಗಿದ್ದು, ದೇಶಾದ್ಯಂತ ಉತ್ತೀರ್ಣರಾಗಿರುವ 759 ಅಭ್ಯರ್ಥಿ ಗಳ ಪೈಕಿ ನಮ್ಮ ರಾಜ್ಯದ 23 ಸಾಧಕರೂ ಸೇರಿದ್ದಾರೆ.

ಈ ಪೈಕಿ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರು ಅವರ ತಮ್ಮನ ಮಗ ರಾಹುಲ್ ಶರಣಪ್ಪ ಸಂಕನೂರು 17ನೇ ರ್‍ಯಾಂಕ್ ಪಡೆದಿದ್ದು, ರಾಜ್ಯಕ್ಕೆ ಮೊದಲ ಸ್ಥಾನ ಪಡೆದಿದ್ದಾರೆ. ಬೆಂಗಳೂರಿನ ಬಿಎಂಎಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಈಗಾಗಲೇ ಐಎಫ್‌ಎಸ್ ಅಧಿಕಾರಿಯಾಗಿರುವ ಎನ್.ಲಕ್ಷ್ಮೀ 45ನೇ ರ್‍ಯಾಂಕ್ ಪಡೆದಿದ್ದಾರೆ. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಆಕಾಶ್ ಎಸ್. 78ನೇ ರ್‍ಯಾಂಕ್ ಪಡೆದಿದ್ದಾರೆ.

ಕೃತ್ತಿಕಾ 100, ಎಚ್.ಆರ್. ಕೌಶಿಕ್ 240, ಎಚ್.ಬಿ.ವಿವೇಕ್ 257, ನಿವೇದಿತಾ 303, ಗಿರೀಶ್ ಧರ್ಮರಾಜ್ ಕಾಲಗೊಂಡ್ 307, ಮಿರ್ಜಾ ಕದರ್ ಬೇಗ್ 336, ಯು.ಪಿ. ತೇಜಸ್ 338, ಬಿ.ಜೆ. ಹರ್ಷವರ್ಧನ್ 352, ಪಕೀರೇಶ್ ಕಲ್ಲಪ್ಪ ಬಾದಾಮಿ 372, ಡಾ| ನಾಗಾರ್ಜುನ ಗೌಡ 418, ಬಿ.ಬಿ. ಅಶ್ವಿಜಾ 423, ಆರ್. ಮಂಜುನಾಥ 495, ಎಸ್. ಬೃಂದಾ 496, ಹೇಮಂತ್ 612, ಎಂ.ಕೆ. ಶ್ರುತಿ 637, ವೆಂಕಟರಾಮ್ 694, ಎಸ್. ಅಶೋಕ್ ಕುಮಾರ್ 711, ಎನ್. ರಾಘವೇಂದ್ರ 739, ಎಚ್. ಸಂತೋಷ್ 753, ಶಶಿಕಿರಣ್ 754 ಇವರು ಕರ್ನಾಟಕದಿಂದ ಪಾಸಾದ ಅಭ್ಯರ್ಥಿಗಳಾಗಿದ್ದಾರೆ. ರಾಜಕುಮಾರ್ ಅಕಾಡೆಮಿಯಿಂದ ತರಬೇತಿ ಪಡೆದ 17 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ.



ಎಂಜಿನಿಯರಿಂಗ್ ಕಲಿತು ಬೆಂಗಳೂರಿನ ಖಾಸಗಿ ಕಂಪನಿಯೊಂದರಲ್ಲಿ ಟೆಕ್ಕಿಯಾಗಿದ್ದೆ. ಆದರೆ, ಆ ನೌಕರಿಗಿಂತ ನಾಗರಿಕರಿಗೆ ನಿರಂತರ ಸೇವೆ ಮಾಡುವಂತಹ ಕೆಲಸಗಿಟ್ಟಿಸಿಕೊಳ್ಳಬೇಕೆಂದು ಯುಪಿಎಸ್ಸಿ ಪರೀಕ್ಷೆ ಬರೆಯಲು ನಿರ್ಧರಿಸಿದೆ. ನಾಲ್ಕು ಸಲ ಪರೀಕ್ಷೆ ಬರೆದರೂ ಯಶಸ್ಸು ಸಿಗಲಿಲ್ಲ. ಯಾವುದೇ ಕಾರಣಕ್ಕೂ ಅರ್ಧಕ್ಕೆ ಬಿಡಬಾರದೆಂಬ ದೃಢಸಂಕಲ್ಪ ಮಾಡಿ 5ನೇ ಸಲ ಪರೀಕ್ಷೆ ಕಟ್ಟಿದೆ. ಅದರಲ್ಲಿ ಯಶಸ್ವಿಯಾದೆ. ಆದರೆ ಈ ಸಲ ಪಾಸಾಗುತ್ತೇನೆ ಎಂಬ ನಂಬಿಕೆ ಇತ್ತು.

• **ರಾಹುಲ್ ಶರಣಪ್ಪ ಸಂಕನೂರು,** ರಾಜ್ಯಕ್ಕೆ ಮೊದಲ ರ್‍ಯಾಂಕ್

## ಕನಸು ನನಸು: ಲಕ್ಷ್ಮೀ

ಬಿಎಂಎಸ್ ಕಾಲೇಜಿನಲ್ಲಿ ಎಂಜಿನಿಯರಿಂಗ್ ಮುಗಿಸಿ ಒಂದು ವರ್ಷ ಐಟಿ ಕಂಪನಿಯಲ್ಲಿ ಕೆಲಸ ಮಾಡಿದ್ದ ಲಕ್ಷ್ಮೀ ಎನ್. ಅವರು ಮೂರನೇ ಪ್ರಯತ್ನದಲ್ಲಿ ಐಎಎಸ್ ಪಾಸಾಗಿದ್ದಾರೆ. 2ನೇ ಪ್ರಯತ್ನದಲ್ಲಿ ಐಎಫ್ಎಸ್ ಆಗಿದ್ದರು. ಈ ಮೂಲಕ ಐಎಎಸ್ ಕನಸು ನನಸಾಗಿದೆ ಎನ್ನುತ್ತಾರೆ.



ಈ ಕುರಿತು ಪ್ರತಿಕ್ರಿಯಿಸಿದ ಅವರು, ಕೋಚಿಂಗ್ ಕ್ಲಾಸ್‌ಗೆ ಹೋಗದೆಯೇ ಮನೆಯಲ್ಲಿ ವ್ಯಾಸಂಗ ಮಾಡಿ ಐಎಎಸ್ ಉತ್ತೀರ್ಣನಾಗಿದ್ದೇನೆ. ಪ್ರತಿ ದಿನ 8-9 ಗಂಟೆಗಳ ಕಾಲ ವ್ಯಾಸಂಗ ಮಾಡುತ್ತಿದ್ದೆ. ಐಎಎಸ್ ಆಗಲೇಬೇಕು ಎಂಬ ಗುರಿಯಿಂದ ಮೂರನೇ ಪ್ರಯತ್ನ ಮಾಡಿ ಯಶಸ್ವಿಯಾಗಿದ್ದೇನೆ. ನನ್ನ ಕನಸು ನನಸಾಗಿದೆ. ಇ-ಆಡಳಿತದಲ್ಲಿ ಮತ್ತಷ್ಟು ಬದಲಾವಣೆ ತರುವ ಕನಸಿದೆ. ಯಾವುದೇ ರಾಜ್ಯದಲ್ಲೂ ಕೆಲಸ ಮಾಡಲು ಸಿದ್ಧಳಿದ್ದೇನೆ ಎಂದು ಸಂತಸ ಹಂಚಿಕೊಂಡರು.

## ವೈದ್ಯನಾಗಿದ್ದೆ, ಈಗ ಐಎಎಸ್ ಆದೆ

ವೃತ್ತಿಯಲ್ಲಿ ವೈದ್ಯರಾಗಿದ್ದ ಆಕಾಶ್ ಎಸ್. ಕೆಎಎಸ್ ಉತ್ತೀರ್ಣರಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಜಂಟಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 6ನೇ ಪ್ರಯತ್ನದಲ್ಲಿ ಐಎಎಸ್ ಗುರಿ ಮುಟ್ಟಿದ್ದಾರೆ.



ಈ ಕುರಿತು ಸಂತಸ ಹಂಚಿಕೊಂಡಿರುವ ಅವರು, ಟಾಪ್ 10ರೊಳಗೆ ರ್‍ಯಾಂಕ್ ಬರುತ್ತದೆ ಎಂದುಕೊಂಡಿದ್ದೆ. 78ನೇ ರ್‍ಯಾಂಕ್ ಬಂದಿರುವುದಕ್ಕೆ ಖುಷಿಯಾಗಿದೆ. ಪ್ರತಿನಿತ್ಯ 10-12 ಗಂಟೆ ವ್ಯಾಸಂಗ ಮಾಡುತ್ತಿದ್ದೆ. ದೆಹಲಿಯಲ್ಲಿ ಒಂದು ವರ್ಷ ತರಬೇತಿ ತೆಗೆದುಕೊಂಡಿದ್ದೆ. ಇನ್‌ಸೈಡ್ಸ್ ಕೋಚಿಂಗ್ ಸೆಂಟರ್‌ನಲ್ಲಿ ಮೂರು ವರ್ಷ ತರಬೇತಿ ಪಡೆದಿದ್ದೇನೆ. ವೃತ್ತಿಯಲ್ಲಿ ವೈದ್ಯರಾಗಿರುವುದರಿಂದ ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿ ಇದೆ. ಅದರ ಹೊರತಾಗಿ ಶಿಕ್ಷಣದಲ್ಲೂ ಆಸಕ್ತಿ ಇದೆ ಎಂದಿದ್ದಾರೆ.